**O.S.No.702/2019 - P.W.1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 03-01-2024.**

**ಪಾಟೀ ಸವಾಲು - ಪ್ರತಿವಾದಿ ಸಂಖ್ಯೆ 1(ಎ), 2 ರಿಂದ 4 ರವರ ಪರ ವಕೀಲರಿಂದ :**

**1)** ದಾವಾ ಸ್ವತ್ತುಗಳು ಮೂಲತಃ ನಮ್ಮ ತಾತ ಮುನಿಶಾಮಪ್ಪ ಅವರ ಆಸ್ತಿ. ಸದರಿ ಸ್ವತ್ತುಗಳು ನಮ್ಮ ತಾತನಿಗೆ 1969 ರಲ್ಲಿ ವಿಭಾಗದ ಮೂಲಕ ದಾವಾ ಸ್ವತ್ತುಗಳು ಬಂದಿರುತ್ತವೆ. ನಮ್ಮ ತಾತ 1999 ರಲ್ಲಿ ದಾವಾ ಸ್ವತ್ತುಗಳನ್ನು ನಿ.ಪಿ. 2 ರ ಪ್ರಕಾರ ನಮ್ಮ ತಂದೆಗೆ ವಿಭಾಗದ ಮುಖಾಂತರ ಕೊಟ್ಟಿರುತ್ತಾರೆ ಎಂದರೆ ಸರಿ. 2 ರಿಂದ 4 ನೇ ಪ್ರತಿವಾದಿಗಳು ನನ್ನ ಸಹೋದರರು. ನಾನು ಈಗ ಒಂದು ಛಾಯಾ ಚಿತ್ರವನ್ನು ನೋಡುತ್ತಿದ್ದು ಅದರಲ್ಲಿರುವ ವ್ಯಕ್ತಿ 2 ನೇ ಪ್ರತಿವಾದಿ ಆಗಿರುತ್ತಾರೆ. ಸದರಿ ಛಾಯಾ ಚಿತ್ರವನ್ನು - **ನಿ.ಡಿ.1** ಎಂದು ಗುರುತಿಸಲಾಯಿತು. ನಿ.ಡಿ.1 ರಲ್ಲಿರುವ ಆಸ್ತಿ ದಾವಾ ಐಟಂ ಸಂಖ್ಯೆ 3 ಆಗಿರುತ್ತದೆ. ಅದರ ವಿಸ್ತೀರ್ಣ 11 ಗುಂಟೆ. ಸದರಿ ಆಸ್ತಿಗೆ ಸಂಬಂಧಿಸಿದಂತೆ ನಮ್ಮ ತಂದೆ 5 ನೇ ಪ್ರತಿವಾದಿಯ ಮೇಲೆ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಆರ್.ಎ. ಸಂಖ್ಯೆ 214/2018-19 ಸಲ್ಲಿಸಿರುತ್ತಾರೆ. ಸದರಿ ಪ್ರಕರಣದ ಆದೇಶದ ದೃಢೀಕೃತ ಪ್ರತಿಯನ್ನು ನೋಡಿ ಒಪ್ಪಿಕೊಂಡು **ನಿ.ಡಿ.2** ಎಂದು ಗುರುತಿಸಲಾಯಿತು. ನಮ್ಮ ತಂದೆ 5 ನೇ ಪ್ರತಿವಾದಿಯ ವಿರುದ್ಧ ದೇವನಹಳ್ಳಿಯ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 395/2018 ದಾಖಲಿಸಿದ್ದು ಸದರಿ ಪ್ರಕರಣ ಚಾಲ್ತಿಯಲ್ಲಿದೆ. ನಮ್ಮ ತಂದೆಗೆ ವಿಭಾಗ ಆದ ನಂತರ ದಾವಾ ಸ್ವತ್ತುಗಳು ಈವತ್ತಿನವರಗೊ ವಿಭಾಗ ಆಗಿರುವುದಿಲ್ಲ. ವಿಭಾಗ ಮಾಡಲು ನನ್ನ ತಕರಾರು ಇಲ್ಲ.

**(5 ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಾಗಿದ್ದು ಪಾಟೀ ಸವಾಲಿಗೆ ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**